ಸೆಲೆಬ್ರಿಟಿ
■ ಹನಿ

# ‘ಹ್ಯಾಟ್ರಿಕ್ ವೀರ’ ಮೆಸ್ಸಿ

ಎರಡು ವಾರಗಳಿಂದ ಲಯೊನಲ್ ಮೆಸ್ಸಿಯದ್ದೇ ಸುದ್ದಿ. ವಿಶ್ವಕಪ್ ಫುಟ್‌ಬಾಲ್‌ನ ಪೂರ್ವಭಾವಿ ಸುತ್ತಿನ ಪಂದ್ಯದಲ್ಲಿ ಈಕ್ವೆಡಾರ್ ವಿರುದ್ಧ ಮೆಸ್ಸಿ ಗಳಿಸಿದ ಅಪೂರ್ವ ಹ್ಯಾಟ್ರಿಕ್‌ನ ‘ಖದರ್’ ಹಾಗಿದೆ. ಪಂದ್ಯ ಆರಂಭವಾದ 45 ಸೆಕೆಂಡುಗಳಲ್ಲೇ ಈಕ್ವೆಡಾರ್ ಮೊದಲ ಗೋಲು ಹೊಡೆದು ಮುನ್ನಡೆದಾಗ ಮೈದಾನದಲ್ಲಿದ್ದ ಅರ್ಜೆಂಟೈನಾ ತಂಡದ ಸಹಸ್ರಾರು ಬೆಂಬಲಿಗರ ಜಂಘಾಬಲವೇ ಉಡುಗಿಹೋಗಿತ್ತು. ಅರ್ಜೆಂಟೈನಾ ಈ ಸಲ ದುರ್ಬಲ ತಂಡ ಎಂಬ ಸುದ್ದಿ ಮೊದಲೇ ಹಬ್ಬಿತ್ತು. ಈ ಪಂದ್ಯದಲ್ಲಿ ಸೋತರೆ ವಿಶ್ವಕಪ್ ಅಂತಿಮ ಸುತ್ತಿಗೂ ತಂಡ ಪ್ರವೇಶಿಸುವುದಿಲ್ಲ ಎನ್ನುವುದು ಖಚಿತವಾಗಿತ್ತು. ಗೆಲುವು ಸಾಧಿಸಿದರೂ, ಮೂರು ಗೋಲುಗಳನ್ನು ಹೊಡೆಯದಿದ್ದರೆ ಅಂತಿಮ ಸುತ್ತಿಗೆ ಹೋಗುವುದು ಅನುಮಾನವೇ ಆಗಿತ್ತು. ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಆಟ ಶುರುವಾಯಿತು. ಮೈದಾನದಲ್ಲಿದ್ದ ಮೆಸ್ಸಿ ತಣ್ಣಗೇ ಇದ್ದ! ಕೆಲವೇ ನಿಮಿಷಗಳಲ್ಲಿ ಮೆಸ್ಸಿ ಮೊದಲ ಗೋಲು ಹೊಡೆದ. ಸಮಬಲದಿಂದ ಅರ್ಜೆಂಟೈನಾ ತಂಡದ ಹುರುಪು ಹೆಚ್ಚಿತು. ನೋಡನೋಡುತ್ತಿದ್ದಂತೆಯೇ ಇನ್ನೊಂದು ಗೋಲು ಹೊಡೆದ. ತಂಡಕ್ಕೆ ಆನೆಬಲ ಬಂತು. ಪಂದ್ಯ ಮುಗಿಯುವುದರೊಳಗೆ ಮೆಸ್ಸಿಯೇ ಮೂರನೇ ಗೋಲು ಹೊಡೆದ! ಅರ್ಜೆಂಟೈನಾ ಮುಂದಿನ ವರ್ಷ ರಷ್ಯಾದಲ್ಲಿ ನಡೆಯಲಿರುವ ವಿಶ್ವಕಪ್ ಅಂತಿಮ ಸುತ್ತಿಗೆ ತೇರ್ಗಡೆಯಾಯಿತು.

ಮೆಸ್ಸಿ ಹೊಡೆದ ಮೂರನೇ ಗೋಲು ಮಾತ್ರ ಫುಟ್‌ಬಾಲ್ ಜಗತ್ತಿನ ದಂತಕತೆಗಳಲ್ಲಿ ಅಜರಾಮರವಾಗಿ ಉಳಿಯುವಂತಹ ಗೋಲು! ‘ಹಾಗೆ ಗೋಲು ಹೊಡೆಯುವುದು ಸಾಧ್ಯವೇ ಇಲ್ಲ’ ಎಂದು ಸ್ವತಃ ಈಕ್ವೆಡಾರ್‌ನ ಕೋಚ್ ಕೂಡಾ ಗಟ್ಟಿಧ್ವನಿಯಲ್ಲಿ ಹೇಳಿಕೆ ನೀಡಿದ! ಅರ್ಧ ಮೈದಾನದಲ್ಲಿ ನಿಯಂತ್ರಣಕ್ಕೆ ಸಿಕ್ಕಿದ ಚೆಂಡನ್ನು ಎದುರಾಳಿ ಆಟಗಾರರ ಕಣ್ಣುತಪ್ಪಿಸಿ ಏಕಾಂಗಿಯಾಗಿ ಮುಂದಕ್ಕೊಯ್ದ ಮೆಸ್ಸಿ, ಡಿ ಆವರಣಕ್ಕೆ ಸ್ವಲ್ಪವೇ ಮುನ್ನ ತನ್ನ ಹಿಂದೆಯೇ ಓಡಿಬರುತ್ತಿದ್ದ ಸಹ ಆಟಗಾರನಿಗೆ ತಳ್ಳಿದ. ಆತ ಸರಿಯಾದ ಸಮಯಕ್ಕೆ ಮತ್ತೆ ಮೆಸ್ಸಿಯತ್ತ ಚೆಂಡನ್ನು ಅಟ್ಟಿದ. ಮೂವರು ಎದುರಾಳಿ ಆಟಗಾರರು ತನ್ನನ್ನು ಸುತ್ತುವರಿದಿದ್ದರೂ, ಅದರಲ್ಲೊಬ್ಬ ಬಲಗೈಯಲ್ಲಿ ತನ್ನನ್ನು ತಳ್ಳಿ ಬೀಳಿಸಿದರೂ ಎಳ್ಳಷ್ಟೂ ಅಂಜದ ಮೆಸ್ಸಿ, ನೆಲಕ್ಕುರುಳುವ ಮುನ್ನವೇ ಚೆಂಡನ್ನು ಗೋಲಿನತ್ತ ಬಲವಾಗಿ ಒದ್ದ. ಇತ್ತ ಮೆಸ್ಸಿ ನೆಲಕ್ಕುರುಳುತ್ತಿದ್ದರೆ ಅತ್ತ ಚೆಂಡು ವೇಗದಿಂದ ಗೋಲ್‌ಪೋಸ್ಟ್‌ನೊಳಕ್ಕೆ ನುಗ್ಗಿತು! ನಿಜಕ್ಕೂ ಅದೊಂದು ಅದ್ಭುತ ಶಾಟ್.

ಜಗತ್ತಿನಾದ್ಯಂತ ಕೋಟ್ಯಂತರ ಫುಟ್‌ಬಾಲ್ ಪ್ರೇಕ್ಷಕರು ಕಣ್ಣು ಬಾಯಿ ಬಿಟ್ಟುಕೊಂಡು ನೋಡುತ್ತಲೇ ಇದ್ದರು. ಯೂಟ್ಯೂಬ್‌ನಲ್ಲಿ ಒಂದೇ ದಿನ ಆ ಹೊಡೆತವನ್ನು ಕೋಟ್ಯಂತರ ಜನ ಮತ್ತೆ ಮತ್ತೆ ವೀಕ್ಷಿಸಿದರು. ಫುಟ್‌ಬಾಲ್ ಎನ್ನುವ ಆಟ ಇರುವವರೆಗೇ ಆ ಗೋಲು ಮತ್ತೆ ಮತ್ತೆ ವೀಕ್ಷಕರ ಕಣ್ಮನ ತಣಿಸುತ್ತಲೇ ಇರುತ್ತದೆ. ಈಗ ಇಡೀ ಜಗತ್ತು ‘ಮೆಸ್ಸಿಯನ್ನು ಮೀರಿಸುವ ಇನ್ನೊಬ್ಬ ಆಟಗಾರ ಬರಲು ಸಾಧ್ಯವೇ ಇಲ್ಲ’ ಎಂದು ಮುಕ್ತಕಂಠದಿಂದ ಕೊಂಡಾಡುತ್ತಿದೆ. ನಂಬರ್ 10 ಟೀಶರ್ಟ್ ಧರಿಸುವ ಮೆಸ್ಸಿ ಹೊಡೆದ ಈ ಮೂರನೇ ಗೋಲು, ಫುಟ್‌ಬಾಲ್ ಜಗತ್ತಿನ ಈವರೆಗಿನ ಅತ್ಯದ್ಭುತ ಹತ್ತು ಗೋಲುಗಳಲ್ಲಿ ಒಂದೆಂದು ದಾಖಲೆಗೆ ಸೇರಿದೆ.

ಮೆಸ್ಸಿಯ ಮಾರುಕಟ್ಟೆ ಬೆಲೆಯೂ ಈಗ ಒಂದೇ ಸಮನೆ ಏರಿದೆ. ಸದ್ಯಕ್ಕೆ ಬಾರ್ಸಿಲೋನಾ ಕ್ಲಬ್ ತಂಡದಲ್ಲಿರುವ ಮೆಸ್ಸಿಯ ಕಾಂಟ್ರಾಕ್ಟ್ ಮುಂದಿನ ವರ್ಷ ಆಗಸ್ಟ್ ವೇಳೆಗೆ ಮುಗಿಯಲಿದೆ. ಮುಂದಿನ ಸೀಸನ್‌ನಲ್ಲಿ ಈತನನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳಲೇಬೇಕೆಂದು ದೃಢನಿಶ್ಚಯ ಮಾಡಿದಂತಿರುವ ಮ್ಯಾಂಚೆಸ್ಟರ್ ಸಿಟಿ ಕ್ಲಬ್, ಈಗಾಗಲೆ ಈತನ ಜತೆಗೆ ಹಲವು ಸುತ್ತಿನ ಮಾತುಕತೆ ನಡೆಸಿದೆ. ಮ್ಯಾಂಚೆಸ್ಟರ್ ಸಿಟಿ ಕ್ಲಬ್ ಜತೆಗೆ ಒಪ್ಪಂದಕ್ಕೆ 3,570 ಲಕ್ಷ ಪೌಂಡ್ ಸಂಭಾವನೆಯ ಬಗ್ಗೆ ಚರ್ಚೆ ನಡೆದಿದೆಯಂತೆ. ಇನ್ನೊಂದು ಮಾಹಿತಿಯ ಪ್ರಕಾರ, ಬಾರ್ಸಿಲೋನಾ ಕ್ಲಬ್ ಈತನನ್ನು ಉಳಿಸಿಕೊಳ್ಳಲು ಹೊಸ ‘ಆಫರ್’ ಮುಂದಿಟ್ಟಿದೆ. ವಾರಕ್ಕೆ 5 ಲಕ್ಷ ಪೌಂಡ್ (ಸುಮಾರು 4.20 ಕೋಟಿ ರೂಪಾಯಿ) ಸಂಭಾವನೆ ಮತ್ತು 8 ಕೋಟಿ ಪೌಂಡ್ ಬೋನಸ್ (ಸುಮಾರು 664 ಕೋಟಿ ರೂಪಾಯಿ) ಈ ಆಫರ್ ಅಂತೆ! ಬಹುತೇಕ ಮೆಸ್ಸಿ ಮ್ಯಾಂಚೆಸ್ಟರ್ ಪಾಲಾಗಬಹುದು ಎನ್ನುವುದು ಸದ್ಯದ ಊಹೆ.



30ರ ಹರೆಯದ ಮೆಸ್ಸಿ ಈಕ್ವೆಡಾರ್ ವಿರುದ್ಧ ದಾಖಲಿಸಿದ ಹ್ಯಾಟ್ರಿಕ್ ಗೋಲು, ಈತನ ವೃತ್ತಿಜೀವನದ 44ನೇ ಹ್ಯಾಟ್ರಿಕ್! ಈಗಿನ ಈತನ ಖ್ಯಾತಿಯ ಮುಂದೆ ಇನ್ನೊಬ್ಬ ವಿಶ್ವಖ್ಯಾತಿಯ ಆಟಗಾರ ರೊನಾಲ್ಡೊ ಕೂಡಾ ಮಂಕಾದಂತೆ ಕಾಣುತ್ತಿದ್ದಾನೆ. ಅರ್ಜೆಂಟೈನಾದ ಜನ ಮೆಸ್ಸಿಯನ್ನು ಈಗ 1986ರಲ್ಲಿ ದೇಶಕ್ಕೆ ವಿಶ್ವಕಪ್ ತಂದುಕೊಟ್ಟ ಮೆರಡೋನಾ ಜತೆಗೆ ಹೋಲಿಸುತ್ತಿದ್ದಾರೆ. ಚೀನಾದಲ್ಲಿ ಮೆಸ್ಸಿ ಬಗ್ಗೆಯೇ ಒಂದು ಥೀಮ್ ಪಾರ್ಕ್ ಕೂಡಾ ಸಿದ್ಧವಾಗುತ್ತಿದೆ. 1700 ಲಕ್ಷ ಯೂರೋ ವೆಚ್ಚದ ಈ ಥೀಮ್ ಪಾರ್ಕ್‌ನಲ್ಲಿ ಮೆಸ್ಸಿಯ ಸಂಪೂರ್ಣ ಜೀವನ ಚಿತ್ರಣ ಮಲ್ಟಿಮೀಡಿಯಾದಲ್ಲಿ ಸಿಗಲಿದ್ದು, ಆತನ ಜತೆಗೆ ವೀಕ್ಷಕರು ಮಾತನಾಡುವ ತಂತ್ರಜ್ಞಾನವೂ ಇದೆಯಂತೆ. ಶಾಂಘೈನಿಂದ ಈ ಪಾರ್ಕ್‌ಗೆ ನೇರ ರೈಲು ವ್ಯವಸ್ಥೆ ಮಾಡಲಾಗಿದ್ದು, ಪ್ರತಿ ವರ್ಷ 4 ಕೋಟಿ ಜನರು ಈ ಪಾರ್ಕ್‌ಅನ್ನು ಸಂದರ್ಶಿಸುವ ನಿರೀಕ್ಷೆ ಇದೆ! ಈ ಥೀಮ್ ಪಾರ್ಕ್ ನಿರ್ಮಾಣ 2020ರಲ್ಲಿ ಪೂರ್ಣಗೊಳ್ಳಲಿದೆಯಂತೆ! ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65